**ಅಸಲು ದಾವ ಸಂಖ್ಯೆಃ 580/2020**
**ಪಿ .ಡಬ್ಲ್ಯೂ -1**

ದಿಃ22.08.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಶ್ರೀ ಎಸ್ ವಿ ಕೆ ರವರಿಂದಃ-**

1. ನಾನು ನನ್ನ ದಾವಾ ಪತ್ರದ 2 ನೇ ಶೆಡ್ಯೂಲ್ ಆಸ್ತಿ 11 ಪೀಟ ಅಗಲ ಹಾಗೂ 40 ಪೀಟ್ ಉದ್ದ ಎಂದು ಬರೆದಿದ್ದೇನೆ ಎಂದರೆ ಸರಿ. ದಾವಾ ಪತ್ರ ಶೆಡ್ಯೂಲ್ 2 ಆಸ್ತಿ ನಮ್ಮ ಕಬ್ಜಾ ವಹಿವಾಟಿನಲ್ಲಿರುತ್ತದೆ. ದಾವಾ ಪತ್ರದ ಶೆಡ್ಯೂಲ್ 3 ರ ದಾವಾ ಆಸ್ತಿಯ ಅಳತೆಯನ್ನು ಮಾಡಿಲ್ಲ ಎಂದರೆ ಸರಿ ಸಿಟಿ ಸರ್ವೇ ಇಲಾಖೆಯವರು ಅಳತೆ ಮಾಡಿರುತ್ತಾರೆ. ಈ ದಾವೆಯನ್ನು ಸಲ್ಲಿಸುವುದಕ್ಕಿಂತ ಮೊದಲು ಶೆಡ್ಯೂಲ್ 3 ಆಸ್ತಿಯ ನಕಾಶೆಯನ್ನು ನಾನು ಪರಿಶೀಲಿಸಿರುತ್ತೇನೆ. ಸದರಿ ನಕಾಶೆಯಲ್ಲಿ ಅಳತೆಗಳನ್ನು ಬರೆದಿರುತ್ತಾರೆ. ನಾನು ಯಾವ ದಿನಾಂಕದಂದು ಸದರಿ ನಕಶೆಯನ್ನು ನೋಡಿದೆನು ಎಂದು ನನಗೆ ನೆನಪಿಲ್ಲ. ನಾನು ಯಾವ ದಿನಾಂಕದಂದು ಶೆಡ್ಯೂಲ್ 3 ಆಸ್ತಿಯ ಉತಾರನ್ನು ನಾನು ಈ ಪ್ರಕರಣ ದಾಖಲಿಸುವುದಕ್ಕಿಂತ ಮೊದಲು ನೋಡಿದೆನು. ನಾನು ನೋಡಿದ ನಕಾಶೆಯಲ್ಲಿ 2ftx40ft ಎಂಬ ಉಲ್ಲೇಖ ಇದೆ. ಶೆಡ್ಯೂಲ್ 1 ಆಸ್ತಿ ನನ್ನ ಮಾಲ್ಕಿ ಆಸ್ತಿ ಎಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಈ ರೀತಿ ನಾನು ಸಿ ಟಿ ಸರ್ವೇ ಉತಾರನ್ನು ಹಾಜರುಪಡಿಸಿರುತ್ತೇನೆ. ಸಿಟಿಎಸ್ ಉತಾರದಲ್ಲಿ ಶೆಡ್ಯೂಲ್ 1 ರ ಪ್ರಾಪರ್ಟಿ ನನ್ನ ಮಾಲ್ಕಿ ಹಕ್ಕಿನ ಆಸ್ತಿ ಎಂದು ಎಲ್ಲಿಯೂ ಉಲ್ಲೇಖಿಸಿಲ್ಲ ಎಂದರೆ ಸರಿಯಲ್ಲ. ಶೆಡ್ಯೂಲ್ 1 ರ ಆಸ್ತಿ ವಾಂಟನಿಯಾಗಿ ನನ್ನ ತಂದೆಯ ಹೆಸರಿಗೆ ಬಂದಿರುತ್ತದೆ. ನನ್ನ ತಂದೆ 2018 ರಲ್ಲಿ ಮೃತರಾಗುವುದಕ್ಕಿಂತ ಮೊದಲು ನನ್ನ ತಂದೆಯವರಿಗೆ ಆಗಲೀ ಅಥವಾ ರವೀಂದ್ರ ಅವರಿಗೆ ಆಗಲೀ ಶೆಡ್ಯೂಲ್ 1 ಆಸ್ತಿಯ ಕುರಿತಾಗಿ ಯಾವುದೇ ತಕರಾರು ಇರಲಿಲ್ಲ ಎಂದರೆ ಸರಿ. ನಮ್ಮ ಮಟ್ಟಿಕಲ್ಲಿ ಕುಟುಂಬದಲ್ಲಿ ಹಿಸ್ಸೆಯಾಗುವುದಕ್ಕಿಂತ ಮೊದಲು ಸಾಮಾಯಿಕ

ಆಸ್ತಿಗಳಾಗಿದ್ದವು ಎಂದರೆ ಸರಿ. ನನಗೆ ವಾಂಟನಿ ಕಾಗದ ಪತ್ರವನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಲು ತೊಂದರೆ ಇರುತ್ತದೆ. ನಾನು ಕುಟುಂಬದ ಆಸ್ತಿಗಳ ಕುರಿತಾಗಿ ವಾಂಟನಿಯಾದ ಪತ್ರದ ಬಗ್ಗೆ ವಕೀಲರಿಗೆ ಮಾಹಿತಿಯನ್ನು ನೀಡಿರುತ್ತೇನೆ. ನಾನು ನನ್ನ ಕವಲಿನ ಹಾಗೂ ರವೀಂದ್ರ ರವರ ಕವಲು ಹಾಗೂ ಇತರ ಸದಸ್ಯರ ಕವಲಿನಲ್ಲಿ ಯಾವ ರೀತಿ ವಾಂಟನಿಯಾಗಿತ್ತು ಎಂದು ವಾಂಟನಿ ಕಾಗದ ಪತ್ರ ನೋಡಿ ಮಾಹಿತಿ ನೀಡಿರುತ್ತೇನೆ. ಸಿಟಿಎಸ್ ನಂಬರ 4012 ಸಿ ಇದರಲ್ಲಿ ರವೀಂದ್ರ ರವರಿಗೆ ಬಂದ ಪಾಲಿನ ಆಸ್ತಿಯನ್ನು ಉಪಭೋಗ ಮಾಡುತ್ತಿದ್ದರು ಎಂದರೆ ಸರಿ. ಸಿಟಿಎಸ್ ನಂಬರ 4012 ಬಿ ಇದರ ಪಶ್ಚಿಮ ದಿಕ್ಕಿನಲ್ಲಿ ಬ್ಯಾಕ ಏರಿಯಾ ಇಲ್ಲ. ಶೆಡ್ಯೂಲ್ ಎ ಗೋಡೆಯ ಕುರಿತಾಗಿ ನ್ಯಾಯಾಲಯದಲ್ಲಿ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಎ ಶೆಡ್ಯೂಲ್ ಆಸ್ತಿಯ ಕುರಿತಾಗಿ ನಾನು ವಾಂಟನಿ ಪತ್ರವನ್ನು ನಾನು ವಕೀಲರಿಗೆ ತೋರಿಸಿರುತ್ತೇನೆ. ವಾಂಟನಿ ಪತ್ರದಲ್ಲಿ ಬರೆದಿರುವ ವಿಚಾರ ತಪ್ಪಾಗಿದೆ ಎಂದು ನಾವು ಪ್ರಶ್ನಿಸಿಲ್ಲ. ದಾವಾ ಶೆಡ್ಯೂಲ್ 1 ರ ಆಸ್ತಿ ಸಮೂಹಿಕ ಆಸ್ತಿಯಾಗಿದ್ದರು ನಮಗೆ ಸೇರಿದ ಆಸ್ತಿಯಾಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶೆಡ್ಯೂಲ್ 3 ರ ಆಸ್ತಿಯ ಮೇಲೆ ನಮಗೆ ಯಾವುದೇ ಮಾಲ್ಕೀ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಮುಂದುವರೆದ ಸಾಕ್ಷಿಯ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**sd/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**

**ಬೆಳಗಾವಿ.**